re: (ii) Non-Recognition of the Womens College Ranibennur, Dharwad District.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಉಪಾಧ್ಯಕ್ಷರೇ, ನಿಯಮ ೩೧೨ರ ಕೆಳಗೆ ಬಹಳ ಗಂಭೀರವಾದ ಒಂದು ವಿಚಾರವನ್ನು ತಮ್ಮ ಮುಖಾಂತರ ಶಿಕ್ಷಣ ಸಚಿವರ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಬಯಸುತ್ತೇನೆ. ರಾಣೆಬೆನ್ನೂರು ಮಹಿಳೆಯರ ಕಾಲೇಜನ್ನು ರದ್ದತಿ ಮಾಡಿ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ನಂಜುಂಡಪ್ಪನವರು ಎಂಥ ಘೋರ ಅನ್ಯಾಯವನ್ನು ಮಾಡಿದ್ದಾರೆ ಎಂಬ ವಿಷಯದ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಸೆಕ್ಷನ್ ೫೩, ಸಬ್ ಸೆಕ್ಷನ್ ೪ರ ಕೆಳಗೆ ಅವರು ಸ್ಥಳೀಯ ವಿಚಾರಣಾ ಸಮಿತಿಯನ್ನು ಅಫಿಲಿಯೇಷನ್ ಕೊಡುವ ಬಗ್ಗೆ ಅಧ್ಯಯನ ಮಾಡಲು ಕಳುಹಿಸಿದರು. ೧೯೮೧-೮೨ನೇ ಸಾಲಿಗೆ ಅಫಿಲಿಯೇಷನ್ ಮುಂದುವರೆಸುವ ಸಲುವಾಗಿ ತನಿಖೆ ಮಾಡಲು ಜುಲೈ ತಿಂಗಳಲ್ಲಿ ಸ್ಥಳೀಯ ವಿಚಾರಣಾ ಸಮಿತಿಯನ್ನು, consisting of two Syndicate members out of whom one was the Chairman and the other three persons were the Principals of Colleges, ಈ ಸಮಿತಿಯವರು ಅಲ್ಲಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿತು. ಅಲ್ಲಿ ಹೊಸ ಮ್ಯಾನೇಜ್‌ಮೆಂಟ್ ಮತ್ತು ಹಳೇ ಮ್ಯಾನೇಜ್‌ಮೆಂಟ್‌ಗಳ ಬಗ್ಗೆ ತಕರಾರು ಪ್ರಾರಂಭವಾಗಿತ್ತು. ಸ್ಥಳೀಯ ವಿಚಾರಣಾ ಸಮಿತಿ ಹೋದಾಗ ಜಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಠದ ಮ್ಯಾನೇಜ್‌ಮೆಂಟಿನವರು ಸಮಿತಿಯನ್ನು ಬರಮಾಡಿಕೊಂಡು ನಮ್ಮಲ್ಲಿ ಮೊದಲು ಬರಬೇಕೆಂದು ಕೇಳಿಕೊಂಡಿದ್ದರಿಂದ ಅಲ್ಲಿ ಮೊದಲು ಹೋಗಿ ವಿಚಾರ ಮಾಡಿ ಕೇಳಿದಾಗ ಅಲ್ಲಿ ಸ್ಟಾಫ್ ಮೆಂಬರ್ಸ್ ಇರಲಿಲ್ಲ, ಪ್ರಿನ್ಸಿಪಾಲರು ಇರಲಿಲ್ಲ ಫೈಲ್ಸ್ ಇರಲಿಲ್ಲ, ಲೈಬ್ರರಿ ಇರಲಿಲ್ಲ, ಏನೂ ಇರಲಿಲ್ಲ. ಅವರು this is the photostat copy of the agreement entered between two managements ಎಂದು ಹೇಳಿದರು. ಅದನ್ನು ನೋಡಿದ ಮೇಲೆ ನಿಯಮದ ಪ್ರಕಾರ ಅಗ್ರಿಮೆಂಟ್ ಏನಿದೆ ಅದರ ಪ್ರಕಾರ ಮೊದಲನೇ ಕ್ಲಾಸ್‌ನಲ್ಲಿ ನಾನ್-ಟೀಚಿಂಗ್ ಸ್ಟಾಫ್ ತೆಗೆಯಬಾರದು, ಅದರ ನೇಮಕಾತಿ ರಕ್ಷಣೆ ಮಾಡಬೇಕೆಂದು ಕಂಡೀಷನ್ ಹಾಕಲಾಗಿದೆ. ಹೀಗಿರುವಾಗ ಹೊಸ ಮ್ಯಾನೇಜ್‌ಮೆಂಟಿನ ಕಾರ್ಯದರ್ಶಿಯವರಾದ ಶ್ರೀ ಮರಿಸ್ವಾಮಿಯವರು ಬಂದ ಕೂಡಲೇ ಎಲ್ಲ ಶಿಕ್ಷಕರನ್ನು (೧೦-೧೨ ಮಂದಿ) ಅಲ್ಲಿಂದ ತೆಗೆದರು. So called the new management have violated the first condition of the said agreement. ಹೀಗಿರುವಾಗ ಎಲ್ಲವನ್ನು ವಿಚಾರ ಮಾಡಿಕೊಂಡ ಮೇಲೆ ಅಲ್ಲಿ ನಮಗೆ ಯಾವುದೇ ಡಾಕ್ಯುಮೆಂಟ್ಸ್ ಮತ್ತು ಸರಿಯಾದ ಉತ್ತರಗಳು ಅಫಿಲಿಯೇಷನ್ ಕಂಟಿನ್ಯುಯೇಷನ್ ಬಗ್ಗೆ ಸಿಗಲಿಲ್ಲ. ಆಷ್ಟರಲ್ಲಿ ಹಳೇ ಮ್ಯಾನೇಜ್‌ಮೆಂಟಿನವರು ಕಾಯುತ್ತಿದ್ದುದನ್ನು ನೋಡಿ ಹಳೇ ಮ್ಯಾನೇಜ್‌ಮೆಂಟಿನ ಕಡೆಗೆ ಹೋದೆವು. ಅದನ್ನು ಆದಿ ಮಧ್ಯದ ಸೇವಾ ಸಂಘದವರು ಬಹಳ ಕಷ್ಟಪಟ್ಟು ನಡೆಸುತ್ತಿದ್ದರು. ಅಲ್ಲಿ ಈ ಕಾಲೇಜಿನ ಪ್ರಿನ್ಸಿಪಾಲರು ಇದ್ದರು ಮತ್ತು ಶಿಕ್ಷಕರು ಇದ್ದರು. ಆವೇಲೆ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯ, ಹೀಗೆ ಪ್ರತಿಯೊಂದನ್ನು ಇನ್ಸ್‌ಪೆಕ್ಷನ್ ಮಾಡಿ ಡಾಕ್ಯುಮೆಂಟ್ಸ್ ನೋಡಿ, ಲೈಬ್ರರಿ ಹೇಗಿದೆ ಎಂಬುದನ್ನು ಗಮನಿಸಿ ಎಲ್ಲಿ ಕಾಲೇಜನ್ನು ನಡೆಸುತ್ತಾರೆಂಬುದನ್ನು ಸಂಪೂರ್ಣವಾಗಿ ಇನ್ಸ್‌ಪೆಕ್ಷನ್ ಮಾಡಿದ ಮೇಲೆ The Committee found that the satisfactory conditions under Section 53 of the Karnataka Universities Act of 1976 were fulfilled. ನಾವು ಅದನ್ನು ನೋಡಿಕೊಂಡು ಬಂದಮೇಲೆ ಏನು ಶಿಫಾರಸ್ಸು ಮಾಡಿದ್ದೇವೆಂದರೆ, ೧೯೮೨ ಮತ್ತು ೧೯೮೩ರ ಜುಲೈವರೆಗೆ ಅಫಿಲಿಯೇಷನ್ ಕಂಟಿನ್ಯು ಮಾಡುವುದಕ್ಕೆ ಯಾವುದೇ ಆಭ್ಯಂತರ ಇಲ್ಲ, ಎಲ್ಲ ಕಂಡೀಷನ್‌ಗಳನ್ನು ಫುಲ್‌ಫಿಲ್ ಮಾಡಿದ್ದಾರೆಂದು ಲೋಕಲ್ ಇನ್‌ಕ್ವೈರಿ ರಿಪೋರ್ಟನ್ನು ಉಪಕುಲಪತಿಗಳಿಗೆ ಕೊಟ್ಟಿದ್ದೇವೆ. ಆ ಸಮಯದಲ್ಲಿ ಅವರು ಮ್ಯಾನೇಜ್‌ಮೆಂಟು ತಕರಾರಿದ ಬಗ್ಗೆ ವಿಶೇಷ ವರದಿಯನ್ನು ಕೇಳಿದರು. ಅಂತೆಯೇ ನಾವು ವಿಶೇಷ ವರದಿಯೊಂದನ್ನು ಕೂಡ ಕೊಟ್ಟಿದ್ದೇವೆ ಮತ್ತು ಅದರ ಮೇಲೆ ಫೈಂಡಿಂಗ್ ಕೂಡ ಕೊಟ್ಟಿದ್ದೇವೆ. The agreement itself is void and it has no sanctity of Law since this agreement is not a considered agreement between the parties that entered into. ಆದುದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳದೆ ಅದು ಹೈಕೋರ್ಟಿನಲ್ಲಾಗಲಿ ಆಥವಾ ಬೇರೆ ಯಾವ ಕೋರ್ಟಿನಲ್ಲಾಗಲಿ ತೀರ್ಮಾನವಾಗುವವರೆಗೆ old management is

competent to run the college. The affiliation must be given to the old management which is looking after the entire affairs of the college. ಅಂತ ಹೇಳಿ ಆಗಸ್ಟ್ ೧೭ರಂದು ಉಪಕುಲಪತಿಗಳಿಗೆ ಮತ್ತು ರಿಜಿಸ್ಟ್ರಾರರಿಗೆ ವರದಿ ಕೊಟ್ಟಿದ್ದೇವೆ. ಮುಂದೆ ಸೆಪ್ಟೆಂಬರ್ ೧೫ರಂದು ಸ್ಪೆಷಲ್ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ವಿಚಾರಣೆಗೆ ಬಂತು. ಆದರಲ್ಲಿ ನಾನು ಕೂಡ ಹಾಜರಿದ್ದೆ. ಆವರು ಯುನಾನಿಮಸ್ ಆಗಿ ಅಪಿಲಿಯೇಷನ್ ಕಂಟಿನ್ಯುಯೇಷನ್ನಿಗೆ ಶಿಫಾರಸ್ಸು ಮಾಡಿದ್ದಾರೆ. ಹೀಗೆ ಮಾಡಿದ ಮೇಲೆ ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ಲಿಗೆ ಅನಾರೋಗ್ಯದ ನಿಮಿತ್ತ ನಾನು ಹೋಗಲಿಲ್ಲ. ಆ ಸಂದರ್ಭದಲ್ಲಿ, ಹೊಸ ಮ್ಯಾನೇಜ್‌ಮೆಂಟಿನವರು ಉಪಕುಲಪತಿಗಳ ಹತ್ತಿರ ಹೋಗಿ ಬತ್ತಾಯ ತಂದು ನಮ್ಮ ಮ್ಯಾನೇಜ್‌ಮೆಂಟಿನಲ್ಲಿ ನಾವೇ ಕಾಲೇಜಿನ ಕನ್ಸ್ಟ್ರಕ್ಟಿಯನ್ ಆಗಿದ್ದೇವೆಂದು ಚೇಂಜ್ ಆಫ್ ಮ್ಯಾನೇಜ್‌ಮೆಂಟಿಗೆ ಕೇಳಿಕೊಂಡಿದ್ದಾರೆ. ಆಮೇಲೆ ಹೊಸ ಮ್ಯಾನೇಜ್‌ಮೆಂಟಿನವರು ರಾಣಿಬೆನ್ನೂರು ಮುನ್ಸಿಫ್ ಕೋರ್ಟಿಗೆ ಹೋಗಿ ಹಳೇ ಮ್ಯಾನೇಜ್‌ಮೆಂಟಿನವರು ನಮ್ಮ ಮಧ್ಯ ಪ್ರವೇಶಿಸಬಾರದೆಂದು ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ. ಹಳೇ ಮ್ಯಾನೇಜ್‌ಮೆಂಟಿನವರು since there is no sanctity with this agreement, the alleged new management should not insist for the execution of the agreement. ಅಂತ ನಿರ್ಧಾರ ಮಾಡಿ ಧಾರವಾಡದಲ್ಲಿರುವ ಮುನ್ಸೀಫ್ ಕೋರ್ಟಿನಲ್ಲಿ ಹಳೆಯ ಮ್ಯಾನೇಜ್‌ಮೆಂಟು ಮತ್ತು ಆಮೇಲೆ ಅವರೂ ಕೂಡ ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ. Since they too have not other upper Court, they have gone again to Munsiff Court. ಪರಿಸ್ಥಿತಿ ಹೀಗಿದ್ದಾಗ ವೈಸ್ ಛಾನ್ಸಲರ್‌ರವರು ನಮಗೆ ಏನೂ ಹೇಳದೆ ಇನ್ನೊಂದು ಸ್ಪೆಷಲ್ ಎನ್‌ಕ್ವೈರಿ ಕಮಿಟಿಗೆ ಕಳುಹಿಸಿದರು. ಎರಡು ಮ್ಯಾನೇಜ್‌ಮೆಂಟುಗಳ ತಕರಾರನ್ನು ನೋಡಿಕೊಂಡು ಮುಂದುವರಿಯೋಣವೆಂದು ಸ್ಪೆಷಲ್ ರಿಪೋರ್ಟನ್ನು ಸಿಂಡಿಕೇಟ್ ಮುಂದೆ ಇಡಲಿಲ್ಲ. ಒಬ್ಬ ಸಿಂಡಿಕೇಟ್ ಮೆಂಬರ್ ಮತ್ತು ಪ್ರಿನ್ಸಿಪಾಲರಿಂದ ಕೂಡಿದ ಇನ್ನೊಂದು ಕಮಿಟಿಯನ್ನು ಮಾಡಿದ ಮೇಲೆ ಅವರು ಹಳೇ ಮ್ಯಾನೇಜ್‌ಮೆಂಟಿನಲ್ಲಿ ಡಾಕ್ಯುಮೆಂಟ್ ಇಲ್ಲ, ಲೈಬ್ರರಿ ಇಲ್ಲ, ಆದ್ದರಿಂದ ಅದಕ್ಕೆ ಅಪಿಲಿಯೇಷನ್ ಕೊಡಬಾರದೆಂದು ಶಿಫಾರಸ್ಸು ಮಾಡಿದರು. ಆದಾದಮೇಲೆ, They have not referred back to the Academic Council or the Syndicate under the Provision. ಸಬ್‌ಕ್ಲಾಸ್ ೪ರಲ್ಲಿ ಏನು ಹೇಳುತ್ತದೆಂದರೆ ಸೆನೆಟ್ಟಿಗೆ ಮಾಡುವ ಬಗ್ಗೆ ಕಳುಹಿಸಬೇಕು. ಅಲ್ಲಿ ೫೦ ಪರ್ಸೆಂಟ್ ಸದಸ್ಯರು ಹಾಜರಿದ್ದಾಗ ೨/೩ ಭಾಗ ಮೆಜಾರಿಟಿಯಲ್ಲಿ ಪಾಸ್ ಆದಮೇಲೆ ಅಕಾಡೆಮಿಕ್ ಕೌನ್ಸಿಲ್‌ಗೆ ಬಂದು ಅಲ್ಲಿ Affiliation withdraw ಮಾಡಲು ಶಿಫಾರಸ್ಸು ಮಾಡಿ ಕಳುಹಿಸಿಕೊಡಬೇಕು. ಅನಂತರ ಸಿಂಡಿಕೇಟಿಗೆ ಬಂದು ಒಪ್ಪಿಗೆ ಪಡೆದ ಮೇಲೆ ಸರ್ಕಾರಕ್ಕೆ ಬರಬೇಕು. ಛಾನ್ಸಲರ್ ಮತ್ತು ಸರ್ಕಾರ ನೋಡಿದ ಮೇಲೆ ವಿತ್‌ಡ್ರಾ ಮಾಡಬೇಕೇ ಬಿಡಬೇಕೇ ಎಂಬುದನ್ನು ತೀರ್ಮಾನಿಸಬೇಕು. ಈ ರೀತಿ ಇರುವಾಗ ನಮ್ಮ ವೈಸ್ ಛಾನ್ಸಲರ್ ೫೬ನೇ ಸೆಕ್ಷನ್ನಿನ ೪-೫-೬ನೇ ವಿಧಿಗಳನ್ನು ಗಾಳಿಗೆ ತೂರಿ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಅನ್ನು ಗಣನೆಗೆ ತೆಗೆದುಕೊಳ್ಳದೆ, he has flouted the provisions of these two Section of Karnataka University Act 1976 Acts and he has acted as if he is the Government. ಹೀಗೆ ಮಾಡಿ ಆವರು ಕರ್ನಾಟಕ ವಿಶ್ವವಿದ್ಯಾನಿಲಯದ ೨೫ ವರ್ಷಗಳ ಇತಿಹಾಸದಲ್ಲಿ ಬಂದು ಅತ್ಯಂತ ಕರಾಳ ನಿರ್ಧಾರವನ್ನು ತೆಗೆದುಕೊಂಡು ಹರಿಜನಗಿರಿಜನರಿಂದ ನಡೆಯುವ ರಾಣಿಬೆನ್ನೂರು ಮಹಿಳಾ ಕಾಲೇಜಿನ ರದ್ದತಿಗೆ ಶಿಫಾರಸು ಮಾಡಿದ್ದಾರೆ, ಮತ್ತು ಇದಕ್ಕೆ ಪೂರ್ವದಲ್ಲಿ ಅಂದರೆ ೨೫-೧೧-೮೦ರಲ್ಲಿ ಬಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. Sir, I read the notification dated 25-11-1980 issued by the Registrar of Karnataka University, Dharwad.

> "The University has decided not to recommend continuation and extension of affiliation for the Arts and Commerce College for Women. Ranibennur for the year 1981-82 which is involved in a dispute between two managements. The students who are admitted in the said college

during the year 1981-82 are allowed to take admission with immediate effect in any other college of their choice. Students may apply for permission to the University directly and also for condonation of attendance".

The copies of this notification have been marked to all the Principals of constituent and affiliated colleges and to the news papers like Samyukta Karnataka, Hubli, Vishal Karnataka, Viswa Vani, Hubli, Indian Express Bangalore and Deccan Herald Bangalore. ನವೆಂಬರ್ ೨೫ರಂದು ನೋಟಿಫಿಕೇಷನ್ ಹೊರಡಿಸಿದ ಮೇಲೆ ಆ ಫೈಲನ್ನು ಛಾನ್ಸಲರ್ ಮತ್ತು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ. ಮೊದಲು ಸರ್ಕಾರ ಮತ್ತು ಛಾನ್ಸಲರ್ ನೋಡಿ ತೀರ್ಮಾನ ಮಾಡಿದ ಮೇಲೆ ಪ್ರೆಸ್ಸಿಗೆ ಕಳುಹಿಸಬೇಕಾಗಿತ್ತು. ತಾನೇ ಸರ್ಕಾರ ಮತ್ತು ವೈಸ್ ಛಾನ್ಸಲರ್ ಎಂದು ತಿಳಿದುಕೊಂಡು ಮಾಡಿದ್ದಾರೆ. This is how the rules and regulations and the provisions of the Act have been flouted and violated by Dr. D.M. Nanjundappa, Vice-Chancellor of Karnatak University. He has grabbed the Schedule Caste institution and tried to handover to the rich and vested interests. ಆದುದರಿಂದ ಈ ಆಜ್ಞೆಯನ್ನು ತಾವು ತಡಗಟ್ಟಬೇಕೆಂದು ನಾನು ಸರ್ಕಾರದ ಮುಂದೆ ಈ ವಿಷಯವನ್ನು ತಂದಿದ್ದೇನೆ. ಪ್ರತಿಯೊಂದು ಪ್ರಾವಿಷನ್ ಅನ್ನು ಓದಿ ಹೇಳಿ ಅಂದರೆ ಹೇಳುತ್ತೇನೆ.

SRI A. LAKSHMISAGAR.—Sir, let the Hon'ble member restrain himself from making allegations against a gentleman who is not a Member of this House.

MR. DEPUTY SPEAKER.—I agree with you. It is not fair also.

SRI S.S. ARAKERI.—How the method has been used to recommend for the withdraw of the affiliation.?

SRI A. LAKSHMISAGAR.—Let him say that the Vice-Chancellor has not acted fairly.

SRI K H. SRINIVAS.—We have known Dr. D. M. Nanjundappa, the Vice-Chancellor of the Karnataka University. He was in the Government for a long time and nobody will question his integrity and he is one of those persons who is never influenced by the feelings of caste.

MR. DEPUTY SPEAKER.—We should not and need not discuss further.

ಶ್ರೀ ಎಸ್.ಎಸ್. ಅರಕೇರಿ.—ಡಾ. ನಂಜುಂಡಪ್ಪನವರ ಬಗ್ಗೆ ನನಗೆ ಗೌರವ ಇದೆ. ಆದರೆ ಅವರಲ್ಲಿ ಹರಿಜನಗಿರಿಜನರ ಹಾಸ್ಟೆಲ್ ಬಗ್ಗೆ ಜಾತೀಯತೆಯ ಭಾವನೆ ಹೇಗಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. Our officers are intelligent, but their intelligence is not in consonance with the services Policy Rules for the people. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. And majority of the are communal and Caste minded.

MR. DEPUTY SPEAKER.—You have made it sufficiently clear. Do not repeat the facts.

ಶ್ರೀ ಎಸ್.ಎಸ್. ಅರಕೇರಿ.—ನಾನು ಯಾರನ್ನೂ ದುರುದ್ದೇಶದಿಂದ ಆಪಾದನೆ ಮಾಡುತ್ತಿಲ್ಲ. ಬಡವರ ಸಂಸ್ಥೆಯನ್ನು ಎತ್ತಿಹಾಕುವ ಪ್ರಯತ್ನ ಹೇಗೆ ನಡೆದಿದೆ ಮತ್ತು ಅವುಗಳನ್ನು ಶ್ರೀಮಂತರ ಕೈಯಲ್ಲಿ ಕೊಡಲು ಹೇಗೆ ಯತ್ನಿಸುತ್ತಿದ್ದಾರೆಂಬುದನ್ನು ಹೇಳುತ್ತಿದ್ದೇನೆ. ಇವರಿಗೆ ಬಡವರ ಸಂಸ್ಥೆಗಳ ಮೇಲೆ ಏತಕ್ಕೆ ಕಣ್ಣು ? ಆಮೇಲೆ ಎರಡನೇ ಅಂಶ.....

MR. DEPUTY SPEAKER.—Hon'ble Member please conclude.

ಶ್ರೀ ಎಸ್.ಎಸ್. ಅರಕೇರಿ.—ಧಾರವಾಡ ಮತ್ತು ರಾಣೆಬೆನ್ನೂರು ಮುನ್ಸೀಫ್ ಕೋರ್ಟು ಗಳಿಂದ ಸ್ಟೇ ಆರ್ಡರ್ ತಂದಿದ್ದಾರೆ.

MR. DEPUTY SPEAKER.—In what way it is connected, you please tell me. It is irrelevant.

ಶ್ರೀ ಎಸ್. ಎಸ್. ಅರಕೇರಿ.—ಒಬ್ಬೊಬ್ಬರಿಗೆ ಒಂದೊಂದು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನನಗೆ ಎರಡು ನಿಮಿಷ ಕೊಡುವುದಕ್ಕಾಗುವುದಿಲ್ಲವೆ ?

MR. DEPUTY SPEAKER.—You have made it sufficiently clear.

ಶ್ರೀ ಎಸ್. ಎಸ್. ಅರಕೇರಿ.—ಇಲ್ಲಿ ಕಾನೂನು ವಿಭಾಗದಲ್ಲಿ ಅಭಿಪ್ರಾಯವನ್ನು (legal opinion) ತೆಗೆದುಕೊಂಡಿದ್ದಾರೆ. ಎರಡು ಕೋರ್ಟಿನಲ್ಲಿ ತಡೆಯಾಜ್ಞೆ ಇದ್ದಾಗ ಅಡ್ಮಿನಿಸ್ಟ್ರೇಟರನ್ನು ನೇಮಿಸಬೇಕಾಗಿತ್ತು. ಅದನ್ನು ಮಾಡುವುದನ್ನು ಬಿಟ್ಟು ರದ್ದತಿ ಮಾಡಿದರೆ ಅಲ್ಲಿ ವ್ಯಾಸಂಗ ಮಾಡು ತ್ತಿರುವ ಮಕ್ಕಳ ಭವಿಷ್ಯ ಏನು ? ಅದೂ ಅಲ್ಲದೆ ಅದು ಹೆಣ್ಣುಮಕ್ಕಳ ಕಾಲೇಜು. ಶೈಕ್ಷಣಿಕ ವರ್ಷ ಮುಗಿಯಂತ್ತಾ ಇದೆ. ಆ ಶಿಕ್ಷಣ ಸಂಸ್ಥೆಯ ಪರಿಸ್ಥಿತಿಯನ್ನು ನೋಡಿ ಮಕ್ಕಳು ಮತ್ತು ಅವರ ತಂದೆತಾಯಿಗಳು ಚಿಂತಾಕ್ರಾಂತರಾಗಿದ್ದಾರೆ. ಇವತ್ತೂ ಕೂಡ ಕಾಲೇಜು ನಡೆಯುತ್ತಿದೆ. ಪಾಠ ಪ್ರವಚನಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ರದ್ದತಿಯನ್ನು ತೆಗೆದುಹಾಕಿ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮಂಜೂಂತರ ಕೇಳಿ ಕೊಳ್ಳುತ್ತೇನೆ. ಮತ್ತು ಜನವರಿ ೩೦ನೇ ತಾರೀಖು ೧೯೮೨ರಂದು ರದ್ದತಿ ಮಾನ್ಯತೆ ಸರ್ಕಾರ ಕೊಟ್ಟಿ ದ್ದನ್ನು ನಾನು ಖಂಡಿಸುತ್ತೇನೆ. ಈ ಅನ್ಯಾಯವನ್ನು ಸರ್ಕಾರ ಸರಿಪಡಿಸದೆ ಹೆಣ್ಣುಮಕ್ಕಳ ಶಾಲಾ ಕಾಲೇಜು ಮತ್ತು ಹಿಂದುಳಿದ ಆದಿಮ ಜಾತಿ ಸೇವಾ ಸಂಘ, ರಾಣೆಬೆನ್ನೂರು ಇದಕ್ಕೂ ನ್ಯಾಯ ದೊರಕಿಸಿಕೊಡಬೇಕು ಅಂತಾ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ, ಇಲ್ಲವಾದರೆ ಬಡವರ ಹೋರಾಟ ಮುಂದುವರಿಯುವುದೆಂಬ ಎಚ್ಚರಿಕೆಯನ್ನು ಕೊಡುತ್ತೇನೆ.

ಶ್ರೀ ವಿ ಬಿ. ಭಾವಿ.—(ಮುಂಡರಗಿ) ಮಾನ್ಯ ಉಪಾಧ್ಯಕ್ಷರೇ, ಪ್ರೊಫೆಸರ್ ಅರಕೇರಿಯವರು ಈ ವಿಷಯದ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಪುಂಖ್ಯವಾಗಿ ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿ ನಲ್ಲಿ ಆದಿಮ ಜಾತಿ ಸೇವಾ ಸಂಘ ಮತ್ತು ಹರಿಜನಗಿರಿಜನರು ಹಿಂದುಳಿದವರು ಕೂಡಿ ನಡೆಸುತ್ತಿರುವ ಹೆಣ್ಣುಮಕ್ಕಳ ಕಾಲೇಜು ಇದೊಂದೇ ಇರುವುದು. ನಾನು ಈ ಕಾಲೇಜಿನ ಬಗ್ಗೆ ಕ್ರಮ ತೆಗೆದುಕೊಂಡಿ ರುವ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀಮಾನ್ ಸಂಜೀವಪ್ಪನವರ ಯೋಗ್ಯತೆ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದರಲ್ಲಿ ಬರತಕ್ಕ ಕಾನೂನು ಹೇಗಿದೆ, ಕಾನೂನನ್ನು ಯಾವರೀತಿ ಉಪಯೋಗ ಮಾಡಿದ್ದಾರ ಎಂಬ ಬಗ್ಗೆ ಒಂದೆರಡು ಅಂಶವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಸಂಸ್ಥೆ ೧೯೭೯ರಲ್ಲಿ ಪ್ರಾರಂಭವಾಯಿತು. ೧೯೭೯-೮೦ ಮತ್ತು ೧೯೮೦-೮೧ನೇ ಇಸವಿಯಲ್ಲಿ ಆ ಸಾಲಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ತಮ್ಮ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲ ಅಂಶಗಳನ್ನೂ ಪರಿಗಣಿಸಿ ಅಫಿಲಿಯೇಷನ್ ಕೊಟ್ಟಿದೆ. ನಂತರ ಕೊಡಲಿಲ್ಲ. Local Committee headed by Sri Arakeri and he is the only Scheduled Caste Legislator and Syndicate Member of Karnataka University, in the capacity of Chairman he has visited the Institution. ಎಲ್ಲಾ ನೋಡಿ ಕಮಿಟಿಯವರು ವಿಶ್ವ ವಿದ್ಯಾನಿಲಯಕ್ಕೆ ವರದಿಯನ್ನು ಕೊಟ್ಟಿದ್ದರೂ ಹೊಸ ಮ್ಯಾನೇಜ್‌ಮೆಂಟ್ ಮತ್ತು ಹಳೇ ಮ್ಯಾನೇಜ್‌ಮೆಂಟ್ ನಡುವೆ ಡಿಸ್‌ಪ್ಯೂಟ್ ಇದೆಯೆಂದು ಕಾಲೇಜಿನ ಅಫಿಲಿಯೇಷನ್ ರದ್ದು ಮಾಡಿದ್ದಾರೆ. ಈ ರೀತಿ ರದ್ದು ಮಾಡುವ ಪ್ರಶ್ನೆ ಏತಕ್ಕೆ ಉದ್ಭವವಾಯಿತು? ಇದು ಯಾವ ವಿಶ್ವವಿದ್ಯಾನಿಲಯದ ಕಾಯಿದೆ

ಯಲ್ಲಿ ಬರಬೇತ್ತದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಶೈಕ್ಷಣಿಕ ದೃಷ್ಟಿಯಿಂದ ಹರಿಜನಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಡುತ್ತೇವೆಂಬ ಘೋಷಣೆಯೊಂದಿಗೆ ನಾವು ಸರ್ಕಾರ ನಡೆಸುತ್ತಿದ್ದೇವೆ. ಇಷ್ಟೆಲ್ಲಾ ಇದ್ದರೂ ಬಡ ಹೆಣ್ಣು ಮಕ್ಕಳಿಗೆ ತೊಂದರೆ ಮಾಡಿ ಅವರ ವಿದ್ಯಾಭ್ಯಾಸಕ್ಕೆ ಕಲ್ಲು ಹಾಕುವುದಕ್ಕೆ ಹೊರಟಿರುವುದು ಏತಕ್ಕೆ? ನಾನು ಉಪ ಕುಲಪತಿಗಳ ಅಥಾರಿಟಿಯನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಇಲ್ಲಿ ಮಾನವೀಯತೆಯ ಸಮಸ್ಯೆ ಇದೆ. ವಿಶ್ವವಿದ್ಯಾನಿಲಯದವರು ಮಕ್ಕಳಿಗೆ ಆ ಕಾಲೇಜನ್ನು ಬಿಟ್ಟು ಬೇರೆ ಕಾಲೇಜಿಗೆ ಸೇರಿಕೊಳ್ಳಿ ಎಂದು ಡೈರೆಕ್ಷನ್ ಕೊಟ್ಟಿದ್ದಾರೆ. ಎರಡು ಹೊತ್ತು ಅನ್ನಕ್ಕೂ ಗತಿ ಇಲ್ಲದಿರುವ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಟ್ಟು ಯಾವುದಾದರೂ ನೌಕರಿಗೆ ಸೇರಲು ಅವಕಾಶ ಮಾಡಿಕೊಡಬೇಕೆಂಬ ಸದುದ್ದೇಶದಿಂದ ಪ್ರಾರಂಭವಾದ ಈ ಶಿಕ್ಷಣ ಸಂಸ್ಥೆಯಲ್ಲಿ ೫೦ ಪರ್ಸೆಂಟ್ ಹೆಣ್ಣುಮಕ್ಕಳಿಗೆ ಉಚಿತವಾದ ಶಿಕ್ಷಣ ನೀಡಲಾಗುತ್ತಿದೆ. ವಿಶ್ವವಿದ್ಯಾನಿಲಯದವರು ಈ ಅಂಶವನ್ನು ಏತಕ್ಕೆ ಗಮನಿಸಬಾರದು ಎಂಬ ಪ್ರಶ್ನೆಯನ್ನು ಮಾನ್ಯ ವಿದ್ಯಾಮಂತ್ರಿಗಳಿಗೆ ನಾನು ಕೇಳುತ್ತಿದ್ದೇನೆ. ಇಲ್ಲಿ ಮಾನವೀಯತೆಯ ಪ್ರಶ್ನೆ ಅಡಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಕಾನೂನನ್ನು ಯಾವರೀತಿ ಇಲ್ಲಿ ಉಪಯೋಗ ಮಾಡಿದ್ದಾರೆ ಎಂಬ ಪ್ರಶ್ನೆಯೂ ಇದೆ. ಮಾನ್ಯ ಆರಕೇರಿಯವರು ಹೇಳಿದ ಹಾಗೆ ಇವರು ಕೊಟ್ಟು ವರದಿಯನ್ನು ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಪಾಸ್ ಮಾಡಿ ಎಂಡಾರ್ಸ್‌ಮೆಂಟಾಗಿ ಸಿಂಡಿಕೇಟಿಗೆ ಹೋದಾಗ ಈ ಕಮಿಟಿ ಮೇಲೆ ಮತೊಂದು ಕಮಿಟಿಯನ್ನು ನೇಮಿಸಬೇಕಾದ ಅವಶ್ಯಕತೆ ಏನಿತ್ತು? What will be the sanctity and morality of the report of the Committee? ಸಿಂಡಿಕೇಟ್ ಸದಸ್ಯರಾಗಿ, ವಿಧಾನಸಭಾ ಸದಸ್ಯರಾಗಿ ಮಾನ್ಯ ಆರಕೇರಿಯವರು ಕಾಲೇಜಿ ವಹಿಸಿ ರಿಪೋರ್ಟ್ ಕೊಟ್ಟಾಗ ಈ ರೀತಿ ಮಾಡಿದರೆ ಅದರ ಗತಿ ಏನಾಗಬೇಕು. ಸ್ಪೆಷಲ್ ಕಮಿಟಿ ಮಾಡುವ ಉದ್ದೇಶ ಏನಿತ್ತು ಎಂಬುದನ್ನು ಮಾನ್ಯ ಶಿಕ್ಷಣ ಸಚಿವರು ತಿಳಿಸಬೇಕು. ಕರ್ನಾಟಕ ವಿಶ್ವವಿದ್ಯಾನಿಲಯದ ೧೯೭೮ರ ಕಾಯಿದೆಯಲ್ಲಿ ಈ ರೀತಿ ಹೇಳಿದೆ.

Section 56. Withdrawal of Affiliation.

(3) "Before taking the said motion into consideration, the Syndicate shall send a copy of the notice and written Statement mentioned in sub-section (2) to the Principal of the College concerned to gether with an intimation that any representation in writing submitted within a period specified in such intimation on behalf of the College will be considered by the Syndicate."

ಅಫಿಲಿಯೇಷನ್ ರದ್ದು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡುವುದಕ್ಕೆ ಪ್ರಿನ್ಸಿಪಾಲರಿಗೆ ಟೈಂ ಕೊಟ್ಟು ನೋಟೀಸ್ ಕಳುಹಿಸಬೇಕಾಗಿತ್ತು. ಆದರೆ ಇವತ್ತು ಮ್ಯಾನೇಜ್‌ಮೆಂಟಿಗೆ ನೋಟೀಸ್ ಕೊಟ್ಟಿಲ್ಲ. ನೋಟೀಸ್‌ಗೆ ರಿಪ್ಲೈ ಕೊಡುವುದಕ್ಕೆ ಅವಕಾಶ ಕೂಡ ಕೊಟ್ಟಿಲ್ಲ. As if he is the only man to take a decision ಎಂಬಂತೆ ತಾವೇ ತೀರ್ಮಾನ ತೆಗೆದುಕೊಂಡು ರಾಜ್ಯಪಾಲರಿಂದ ಆಸೆಂಟ್ ಬರುವುದಕ್ಕಿಂತ ಮುಂಚೆಯೇ ತಾವೇ ನೋಟಿಫಿಕೇಷನ್ ಇಷ್ಯೂ ಮಾಡಿದ್ದಾರೆ. As if he is Government, ತಾವೇ ತಮ್ಮ ಅಧಿಕಾರವನ್ನು ಚಲಾಯಿಸಿ ಆ ಮೇಲೆ ಸರ್ಕಾರಕ್ಕೆ ಮತ್ತು ರಾಜ್ಯಪಾಲರಿಗೆ ಕಳುಹಿಸಿದ್ದಾರೆ. ಆದ್ದರಿಂದ ಇದು ಅತೀ ಗಂಬೀರವಾದ ಪ್ರಶ್ನೆ ಎಂದು ನಾನು ಹೇಳುತ್ತಿದ್ದೇನೆ, ಇವರು ಕ್ರಮ ತೆಗೆದುಕೊಳ್ಳುವಾಗ ರೂಲ್ಸ್ ರೆಗ್ಯುಲೇಷನ್ ಏನನ್ನೂ ನೋಡಿಲ್ಲ. ಮನಸ್ಸಿಗೆ ಬಂದಹಾಗೆ ಅಫಿಲಿಯೇಷನ್ ರದ್ದು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಮೊದಲೇ ನೋಟಿಫಿಕೇಷನ್ ಹೊರಡಿಸಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ಯಾವ ವಿಶ್ವವಿದ್ಯಾನಿಲಯದ ಆಕ್ಟಿನಲ್ಲಿ ಬರುತ್ತದೋ ಗೊತ್ತಿಲ್ಲ. ನಾನು ಎಲ್ಲಾ ವಿಶ್ವವಿದ್ಯಾನಿಲಯದ ಕಾಯಿದೆಗಳನ್ನೂ ಓದಿದ್ದೇನೆ, ನನಗಂತೂ ಗೊತ್ತಿಲ್ಲ. ಈಗಲಾದರೂ ತಿದ್ದುಪಡಿ ಮಾಡಿದ್ದಾರೋ ಏನೋ ಗೊತ್ತಿಲ್ಲ. ಮಾನ್ಯ ಶಿಕ್ಷಣ ಸಚಿವರನ್ನು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ, ನಾವು ನೀವು ಸೇರಿ ಹಿಂದುಳಿದವರ್ಗಗಳ ಏಳಿಗೆಗಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಜಾರಿಗೆ ತರಬೇಕೆಂದು ಸದನದ ಒಳಗೆ ಮತ್ತು ಹೊರಗೆ ಏನು ಹೇಳುತ್ತಿದ್ದೆವೆಯೋ ಅದರ ಒಂದು ಭಾಗವನ್ನಾ ಜಾರಿಗೆ ತರಲಿವುದಕ್ಕೆ ಪ್ರಯತ್ನ ಮಾಡಬೇಕೆಂದು

ಕೇಳಿಕೊಳ್ಳುತ್ತಿದ್ದೇನೆ. ಇದು ನಮ್ಮ ಹೃದಯದಿಂದ ಬರತಕ್ಕ ಪ್ರಶ್ನೆ. ಇದನ್ನು ಬರೀ ಬಾಯಿಯಿಂದ ಮಾತನಾಡದೇ ಕೃತಿಯಲ್ಲಿ ತರುವ ಪ್ರಯತ್ನ ಮಾಡಬೇಕು. ಕರ್ನಾಟಕ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರು ಮತ್ತು ಕಮಿಟಿಯ ಅಧ್ಯಕ್ಷರಾಗಿ ಮಾನ್ಯ ಆರಕೇರಿಯವರು ಕೊಟ್ಟ ಅಭಿಪ್ರಾಯ ಗಳಿಗೆ ಆ ರೀತಿ ಮಾಡಿದರೆ ಶ್ರೀಮಾನ್ ಆರಕೇರಿಯವರ ಪರಿಸ್ಥಿತಿ ಏನಾಗಬೇಕು? ನಾವು ನೀವು ಸೇರಿ ಕೊಂಡು ಗಂಭೀರವಾಗಿ ಈ ವಿಷಯವನ್ನು ಚರ್ಚೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದನ್ನು ಸರ್ಕಾರದವರು ಗಂಭೀರವಾಗಿ ಪರಿಗಣಿಸದೇಹೋದರೆ ಮುಂದೆ ಉಗ್ರ ಕ್ರಮಗಳನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು ಈ ಎಂದು ಸಭೆಯಂ ಮುಂಬಾಂತರ ಸರ್ಕಾರದ ಗಮನಕ್ಕೆ ತನ್ಮೂಲಕ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮಂತ್ರಿಗಳು ಎರಡು ಮ್ಯಾನೇಜ್‌ಮೆಂಟ್‌ಗಳ ನಡುವೆ ಡಿಸ್‌ಪ್ಯೂಟ್ ಇದ್ದುದರಿಂದ ರದ್ದು ಮಾಡಿದ್ದೇ ವೆಂದು ಹೇಳಬಹುದು. ಆದರೆ...

ಉಪಾಧ್ಯಕ್ಷರು.—ಅದನ್ನು ನೀವು ಏತಕ್ಕೆ ಹೇಳುತ್ತೀರಿ? ಮಂತ್ರಿಗಳು ಬೇಕಾದರೆ ಹೇಳಲಿ. ಮಂತ್ರಿಗಳ ಗಮನಕ್ಕೆ ತಂದಿದ್ದೀರಿ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ವಿ. ಬಿ. ಭಾವಿ.—ಡಿಸ್‌ಪ್ಯೂಟ್ ಇದ್ದಾಗ ಅಫಿಲಿಯೇಷನ್ ರದ್ದತಿಗೆ ಸರ್ಕಾರಕ್ಕೆ ಶಿಫಾರಸು ಮಾಡುವುದಕ್ಕೆ ಉಪಕುಲಪತಿಗಳಿಗೆ ಯಾವ ಅಧಿಕಾರ ಇದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI G. B. SHANKAR RAO (Minister for Education).—Sir, the Chairman, B.A.J.S.S. College for Women, Ranebennur was permitted to start Arts and Commerce College for Women at Ranebennur from June 1979. On the basis of the recommendation of the Karnatak University, Government sanctioned affiliation to that college for the year 1979-80 and 1980-81 It is reported that there has been a split in the governing council of the Management of the College. One such group agreed to the transfer of the College to Sri J.M.M. Vidyapeetha, Chitradurga, entered into an agreement and handed over the college to that management. Another group of the B.AJ.S.S has stated that this agreement was made without the knowledge of the Managing Committee of the B.A.J.S.S. Sangha. Both the Management have approached the Court of Law. In view of this dispute between the B.A.J.S.S. and S.J M.V., Chitradurga, the Karnataka University appointed a special Local Inquiry Committee to enquire into the matter before granting affiliation for 1981-82. This Committee has recommended that the affiliation to the college need not be renewed since that normal conditions of affilation have not been fulfilled. The Karnataka University recommended to Government not to grant continuation of affiliation till the dispute between the managements is settled.

After examining all aspects of the case Government in their Notification No. ED 276 UAC 81 dated 30-1-1982 refused grant of continuation of affiliation to the B.A J.S.S Arts and Commerce College for Women, Ranebennur for the year 1981-82 under section 53 (5) and (6) of the Karnataka State Universities Act, 1976 on the grounds that it is not possible to say that the college is under the management of the regularly constituted Governing Body.

I believe that this has cleared the doubts in the minds of hon'ble Members Sri S. S. Arakeri and Sri Bhavi. The allegations made by Sri Arakeri against Dr. Nanjundappa are without any substance. He should not have made such allegations without making a study. He himself admits that there is a dispute between the two Managements. There are groups in the Management itself. Not only that, there are groups among the staff members and the students also. Sri Arakeri as Chairman of the enquiry Committee has visited the College and has made the enquiry report. He admits that there is a dispute. Both the groups of Management have taken matter to the Court and are fighting a legal battle. The matter is before the courts of Ranebennur and Dharwad and both the Courts have issued stay. Under the circumstances, the University thought fit to appoint a special Enquiry Committee and the Special Enquiry Committee has given a Report saying that no group is in a position to run the College because it is not a regularly constituted body. Groups are not only there among the Managements, but also among the staff Members. One Management group says that it is conducting classes in one particular place and the other also says it is conducting classes in another building. Some people are here and some people are there. Under such circumstances the Vice Chancellor thought fit to appoint a special enquiry committee. Based on the report of the Enquiry Committee he made recommendations not to give continuation to affiliation for the year 1981-82. There was no affiliation given. So there is no question of either withdrawal or cancellation of affiliation. The hon'ble Member must know this. He is also a lawyer. In the absence of an order granting affiliation how can we withdraw or cancell affiliation ? The Law Department opined that it is not correct to grant affiliation to either of the groups. Both of the hon'ble Members agree that the matter is under dispute. One group has obtained stay against another not to interfere in their affairs in running the college and another has challenged the validity of the former group. Thus there is no regularly constituted body according to us. For giving affiliation, there are certain conditions to be fulfilled such as there must be a regularly constituted body to run an institution. This is a very vital factor which made us to refuse affiliation to the College. The Vice Chancellor has been unnecessarily involved. According to hon'ble Member Sri Arakeri he has certain motives. There is no motive. On the basis of the facts placed before the Government we consulted the Law Department because there was a legal point involved. The Law Department opined that affiliation cannot be given. This is the position as it is now today. The hon'ble Member

cannot accuse either the Government or the Vice Chancellor. of the University for recommending the case of this institution.

SRI K. H. SRINIVAS.—Sir, I have to seek one clarification. We are not convinced of the explanation given by the hon'ble Minister. There is no question of giving affiliation to either this group or that group. Management is one thing and institution is another thing. You accord affiliation not to the Management but to the institution. There is a dispute in the governing body. That has to be dealt with in a separate way. But you have not explained to us that this has resulted in total disruption of the college. Here is an hon'ble Member who is connected with that and who has visited the College as the Chairman of the Committee. He says that the College is perfectly in order and there is nothing warranting dis-continuation of affiliation. This local Enquiry Committee business seems to be something of a mischievous nature because when the Affiliation Committee has visited the College and studied the things and has said that the affiliation should continue, that should be the criterion and not the Local Enquiry Committee. So far as the Management is concerned. I say the Government is not that helpless. I presume that this Society must have been registered under the Educational & Religious Societies Registration Act. There is also provision to take over the management of the society if something is not in order.

4-20 P.M.

The Government can certainly step in, put an administrator and continue the affiliation of the college and see what best it can do. But just to take shelter under the dispute and try to do away with the college, putting so many students particularly lady students hailing from vulnerable sections of the society, is the dereliction of the duty on the part of the Government. We are not satisfied with the answer and explanation given by the hon. Minister.

ಶ್ರೀ ಎಸ್. ಎಸ್. ಅರಕೇರಿ —ಸ್ವಾಮಿ, ಉಪ ಕುಲಪತಿಗಳು ಈ ಕ್ರಮಗಳನ್ನು ತೆಗೆದುಕೊಳ್ಳುವಾಗ ಯಾವ ಕಾನೂನು ಪ್ರಕಾರ ತೆಗೆದುಕೊಂಡಿದ್ದಾರೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

SRI G. B. SHANKAR RAO.—Why unnecessarly confuse the issue.

INTERRUPTION

MR. DEPUTY SPEAKER.—First, the hon. Minister will answer the point made out by the Deputy Leader of the Opposition.

SRI G. B. SHANKAR RAO.—I not only said that there are two groups in management. There are also two managements now. The management of Adhimajathi Shikshana Seva Sangha handed over the management of the institution to some other body by an agreement and they say that they are in possession of the institution and so they

are running it. They are now dividied. They are two. Not only that, one man says that he is the Principal of the College and another man also says that he is the Principal of the College. They also say that they are the lecturars of our College and the other also claiming the samething. We are perfectly in order. We have not passed any order under any section of the University Act. We have neither granted the affiliation not cancelled the affiliation.

(INTERRUPTION)

SRI D. DEVARAJ URS.—Was the college running without affiliation ?

SRI G. B. SHANKAR RAO.—Our ex-Chief Minister is quite aware that according to the Universities Act, every year affiliation is needed by any college.

MR. DEPUTY SPEAKER.—Even for high schools, every year it has to be renewed.

SRI G. B. SHANKAR RAO.—Once the College is given permission to run, every year the affiliation has to be renewed. But this year the Government could not give affiliation as there is the dispute. Now, the hon'ble members are agitated about the fate of the students there. The University has permitted the students to join any college even at this stage and also permitted them to appear for examination. What more is needed ? There is no question of inconvenience caused to any student.

ಶ್ರೀ ವಿ. ವಿ. ಭಾವಿ.—ಸ್ವಾಮಿ, ಈಗ ನಾವು ಈ ಸಭೆಯ ಮೂಲಕ ಮಾನ್ಯ ಶಿಕ್ಷಣ ಸಚಿವರಿಗೆ ಎಲ್ಲಾ ಸಂಗತಿಗಳನ್ನು ತಿಳಿಸಿದ್ದೇವೆ. ಆದರೂ ಮಾನ್ಯ ವಿದ್ಯಾ ಮಂತ್ರಿಗಳು ತಮ್ಮ ದಾರಿಯಲ್ಲಿಯೇ ಹೋಗುತ್ತಿದ್ದಾರೆ.

SRI G. B. SHANKAR RAO.—There is no necessity of further explanation or further discussion. I will clarify your point I know your doubt.

SRI V. B. BHAVI.—We are bound to seek clarification. Presuming the Minister's statement is satisfactory, the main point arising out of the statement is, the University has recommended to the Government to withdraw the affiliation. In what way the dispute pending in the court will come in the way of giving affiliation by the Karnataka University. ಯಾವ ಕಾನೂನಿಂ ಪ್ರಕಾರ ವಿಶ್ವವಿದ್ಯಾನಿಲಯದವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು ಇದಕ್ಕೆ ಮಾನ್ಯ ವಿದ್ಯಾ ಸಚಿವರು ಉತ್ತರ ಕೊಡಬೇಕು. We concede that there is a dispute between the management. ಇದರ ಹಿಂದೆ ಯಾವ ಉದ್ದೇಶ ಇದೆ ಎಂಬುದನ್ನು ಮಾನ್ಯ ಅಧ್ಯಕ್ಷರೇ ಅರ್ಥಮಾಡಿಕೊಳ್ಳಬೇಕು. ಶಿಕ್ಷಣ ಸಚಿವರು ಅರ್ಥ ಮಾಡಿಕೊಳ್ಳಬೇಕು. ಯಾವಕಾನೂನು ಪ್ರಕಾರ ಅಫಿಲಿಯೇಷನ್ ವಿತ್‌ಡ್ರಾ ಮಾಡುವುದಕ್ಕೆ ಶಿಫಾರಸು ಮಾಡಿದರು ಎನ್ನುವುದನ್ನು ಹೇಳಬೇಕಂ.

SRI G. B. SHANKAR RAO.—The only concern for them is to get the matter settled in the court early. Or. if the matter is discussed orally, the way is clear to them.

SRI S. S. ARAKERI. –What is the fate of the students.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರಾದಂತ ಅರಕೇರಿಯವರು ಹೇಳುವಾಗ ಆವಶ್ಯಕವಾಗಿಯೋ ಅನಾವಶ್ಯಕವಾಗಿಯೋ ಡಾ. ನಂಜುಂಡಪ್ಪನವರ ಹೆಸರನ್ನು ತಂದರು. ಅದು ಪ್ರಸ್ತುತ. ನನಗನಿಸಿದ್ದು ಏನೆಂದರೆ, ಈ ಸಂಸ್ಥೆಯನ್ನು ನಡೆಸುವುದಕ್ಕೆ ಒಂದು ಸೊಸೈಟಿ ಇತ್ತು. ಆ ಸೊಸೈಟಿಯವರು ಬೇರೆ ಯಾರಿಗೋ ಅಗ್ರಿಮೆಂಟ್ ಮಾಡಿ ಪಹಿಸಿಕೊಟ್ಟರು. ಪಹಿಸಿಕೊಟ್ಟಾಗ ಅದಿಮ ಜಾತಿ ಸಂಘದಿಂದ ವೀರಶೈವ ಮಠಕ್ಕೆ ಹೋಯಿತು. ವೀರಶೈವ ಮಠದಪರಿಗೂ, ಸಂಘದಪರಿಗೂ ಮ್ಯಾನೇಜ್ ಮೆಂಟ್ ಬಗ್ಗೆ ಅವರು ನಡೆಸಬೇಕೆ ? ಇವರು ನಡೆಸಬೇಕೇ ? ಎನ್ನುವ ವಾದ ಬಂದು. ಇಬ್ಬರೂ ಕೋರ್ಟಿಗೆ ಹೋದರು. ಇದರಲ್ಲಿ ವೀರಶೈವರದ್ದು ತಪ್ಪೋ ಸರಿಯೋ, ಆದಿಮ ಜಾತಿಯ ಸಂಘದ್ದು ತಪ್ಪೋ ಸರಿಯೋ ಎನ್ನುವ ಪ್ರಶ್ನೆ ಮುಖ್ಯವಲ್ಲ. ಅಲ್ಲಿ ಪ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ತೊಂದರೆಯಾಗದ ಹಾಗೆ ಸರ್ಕಾರ ತಾನೇ ತೆಗೆದುಕೊಂಡು, ನೀವಿಬ್ಬರೂ ಕೋರ್ಟಿನಲ್ಲಿ ತೀರ್ಮಾನ ಮಾಡಿಕೊಂಡು ಬಂದಮೇಲೆ ಕೊಡುತ್ತೇವೆಂದು ಹೇಳುವುದಕ್ಕೆ ಏನಾಗಿತ್ತು ? ಕಾನೂನಿನ ಭಾದಕ ಇತ್ತೆ ? ದಯವಿಟ್ಟು ಹೇಳಿ.

ಶ್ರೀ ಜಿ.ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ಬಹಳ ಬುದ್ಧಿವಂತಿಕೆಯಿಂದ ಪ್ರಶ್ನೆ ಕೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ನಮ್ಮ ಕರ್ತವ್ಯ.

ಶ್ರೀ ಜಿ. ಬಿ. ಶಂಕರ್‌ರಾವ್.—ಟೋಪಿ ಇಲ್ಲದಿದ್ದರೂ ತಲೆ ಇದೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಕೆಲವರಿಗೆ ತಲೆ ಇರೋದು ಯೋಚನೆ ಮಾಡುವುದಕ್ಕೆ, ಇನ್ನು ಕೆಲವರಿಗೆ ತಲೆ ಇರೋದು ಟೋಪಿ ಹಾಕಿಕೊಳ್ಳುವುದಕ್ಕೆ.

ಶ್ರೀ ಜಿ. ಬಿ ಶಂಕರ್‌ರಾವ್.—ಕೆಲವರಿಗೆ ತಲೆ ಇದ್ದರೂ ಕೂಡ ಯೋಚನೆ ಮಾಡುವುದಕ್ಕೆ ಶಕ್ತಿ ಇರುವುದಿಲ್ಲ, ಅದಕ್ಕೇನು ಮಾಡೋದು. ಮಾನ್ಯ ಸದಸ್ಯರು ವಿದ್ಯಾರ್ಥಿಗಳಿಗೆ ತೊಂದರೆಯಾಗುವ ವಿಷಯವನ್ನು ಹೇಳಿದ್ದಾರೆ. ನಾನು ಆಗಲೇ ಹೇಳಿದ್ದೇನೆ. ನವೆಂಬರ್ ತಿಂಗಳಲ್ಲಿಯೇ ವಿಶ್ವವಿದ್ಯಾನಿಲಯದವರು ಬೇಕಾದ ಕಾಲೇಜುಗಳಿಗೆ ಸೇರಿಕೊಳ್ಳಬಹುದೆಂದು ಹೇಳಿದ್ದಾರೆ. Even at this late stage. we have issued instructions to admit students. Not only that, even if there is shortage of attendance, the students are permitted to appear for the examinations.

SRI V. B. BHAVI.—The Hon'ble Deputy Speaker should come to our rescue.

INTERRUPTION

MR. DEPUTY SPEAKER.—I am not allowing; better we close this subject.

SRI G. B. SHANKAR RAO.—I have not yielded.

(ಗೊಂದಲ)

ಶ್ರೀ ಬಿ. ವಿ. ಬಾವಿ.— ಅಧ್ಯಕ್ಷರೆ, ಕಾನೂನಿನಲ್ಲಿ ಏನು ತೊಂದರೆ ಇದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಲಿಲ್ಲ.

ಶ್ರೀ ಹೆಚ್. ಗಂಗಾಧರನ್.—ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿಲ್ಲವೆ ?

ಶ್ರೀ ಬಿ. ಏ. ಬಾವಿ.— ಕರ್ನಾಟಕದಲ್ಲಿ ಸ್ಟೇ ತಂದದ್ದು. It will not become sub-judice.

SRI H. GANGADHARAN.— By the stay order the University is prevented from...

(ಗೊಂದಲ)

MR. DEPUTY SPEAKER.— I am not allowing you, Sri Bhavi, The hon. Minister is on his legs.

ಶ್ರೀ ಜಿ. ಬಿ. ಶಂಕರ್‌ರಾವ್.— ಅಧ್ಯಕ್ಷರೆ, ನಾನು ಮೊದಲೇ ಸ್ಪಷ್ಟಮಾಡಿದ್ದೇನೆ. ಎರಡು ಸಂಸ್ಥೆಯವರು ಕೋರ್ಟಿನಲ್ಲಿ ಹೋಗಿ ತಡೆಯಾಜ್ಞೆ ತಂದಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅವರು ಈಗ ನೆನಪು ಮಾಡಿಕೊಳ್ಳುತ್ತಿದ್ದಾರೆ. ಇನ್ನು ಮಾನ್ಯ ಪಟೇಲ್ ಅವರು ಒಂದು ಮಾತು ಹೇಳಿದರು. ಇದನ್ನು ನೀವೆ ಏತಕ್ಕೆ ತೆಗೆದುಕೋಡು ನಡೆಸಬಾರದು ಅಂಥ ಕೇಳಿದರು. ನಾವು ನವೆಂಬರ್ ತಿಂಗಳಿನಲ್ಲಿ ಆ ಕಾಲೇಜು ತೆಗೆದುಕೊಂಡು ಪ್ರಾರಂಭ ಮಾಡಲಿಕ್ಕೆ ಹೋದರೆ ಕಟ್ಟಡ ಹುಡುಕಬೇಕ , ಪ್ರಿನ್ಸಿಪಾಲರನ್ನು ಅಪಾಯಿಂಟ್ ಮಾಡಬೇಕು. ಅದಕ್ಕೆ ಅಪ್ಲಿಕೇಷನ್ ಕರೆಯಬೇಕು ಲೆಕ್ಚರರ್ಸ್ ಮತ್ತು ಪ್ರಿನ್ಸಿಪಾಲರನ್ನು ಅಪಾಯಿಂಟ್ ಮಾಡಬೇಕು. ಅವೆಲ್ಲಾ ಮಾಡಲಿಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳ ಆಸಕ್ತಿಯಿಂದ ಆ ರೀತಿ ಮಾಡಿದ್ದೇವೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ನಡೆಸುವುದು ವ್ಯವಹಾರಿಕವಾದುದು ಅಲ್ಲ. ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದನ್ನು ತಪ್ಪಿಸಲಿಕ್ಕೆ ಈ ರೀತಿ ಮಾಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಣಿಬೆನ್ನೂರಿನಲ್ಲಿ ಮತ್ತೊಂದು ಮಹಿಳಾ ಕಾಲೇಜು ಇಲ್ಲ. ಮಹಿಳೆಯರು ಬೇರೆ ಬೇರೆ ಊರಿಗೆ ಹೋಗಬೇಕಾದರೆ ಎಷ್ಟು ಕಷ್ಟವಾಗುತ್ತದೆ, ಅವರ ಬಿಚ್ಚು. ಹಾಸ್ಟೆಲ್ ವಸತಿ, ಮನೆ, ಇವೆಲ್ಲಾ ತಮಗೆ ಗೊತ್ತಿದ್ದು ಸರ್ಕಾರದವರು ಅಡ್ಮಿನಿಸ್ಟ್ರೇಟರ್ ಏತಕ್ಕೆ ಅಪಾಯಿಂಟ್ ಮಾಡಲಿಲ್ಲ.

ಶ್ರೀ ಜಿ. ಬಿ. ಶಂಕರ್‌ರಾವ್.— ಡಿಸೆಂಬರ್‌ನಲ್ಲಿ ಶುರುವು ಮಾಡುವುದು ಇದ್ದು, ಲೆಕ್ಚರರ್ಸ್ ಮತ್ತು ಪ್ರಿನ್ಸಿಪಾಲರನ್ನು ನೇಮಿಸಲಿಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಮಿನಿಸ್ಟ್ರೇಟರ್ ಏತಕ್ಕೆ ನೇಮಿಸಲಿಲ್ಲ ?

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಬೊಮ್ಮಾಯಿ ಅವರು ನನ್ನ ಹಾಗೆ ನ್ಯಾಯವಾದಿಗಳು. ಅಡ್ಮಿನಿಸ್ಟ್ರೇಟರ್ ಏತಕ್ಕೆ ನೇಮಿಸಬೇಕು, ಯಾವ ಸಂಸ್ಥೆಗೆ ನೇಮಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡೂ ಸಂಸ್ಥೆಗೆ,

ಶ್ರೀ ಜಿ. ಬಿ. ಶಂಕರ್‌ರಾವ್.—ಎರಡಕ್ಕೂ ತಡೆ ಆಜ್ಞೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೆ, ಮೊದಲೇ ಶಿಕ್ಷಣ ಖಾತೆ ಗೊಂದಲಮಯ. ಶಿಕ್ಷಣ ಮಂತ್ರಿಗಳು ಮತ್ತಷ್ಟು ಗೊಂದಲಮಯ.

ಶ್ರೀ ಜಿ. ಬಿ. ಶಂಕರ್‌ರಾವ್.— ಅಧ್ಯಕ್ಷರೆ, ನಾನು ಗೊಂದಲಮಯ ಮಾಡಿಲ್ಲ. ಮಾನ್ಯ ಬೊಮ್ಮಾಯಿ ಅವರು ಹೆಣ್ಣುಮಕ್ಕಳು ಕಾಲೇಜು ಎಂದು ಹೇಳುತ್ತಿದ್ದಾರೆ. ಮುಂಬೈ ಕರ್ನಾಟಕದಲ್ಲಿ ನಾವು ಓದಿದ್ದೇವೆ. ಹೆಣ್ಣು ಹುಡುಗರು, ಗಂಡು ಹುಡುಗರು ಒಟ್ಟಿಗೆ ಓದುವಂಥ ವ್ಯವಸ್ಥೆ ಇದೆ. ಮಾನ್ಯ ಬೊಮ್ಮಾಯಿ ಅವರು ಇಲ್ಲಿ ಇದ್ದದ್ದರಿಂದಾನಾಡುತ್ತಾ ಇರಲಿಲ್ಲ. ಆ ಕಡೆಯಿರುವುದರಿಂದ ಮಾತನಾಡುತ್ತಿದ್ದಾರೆ. ಇನ್ನು ಅಡ್ಮಿನಿಸ್ಟ್ರೇಟರ್ ನೇಮಿಸುವ ವಿಚಾರ ಹೇಳಿದರು. ಅದೇನು ನಮ್ಮ ಸಂಸ್ಥೆಯೇ, ನಾವು ಕಾಲೇಜು ನಡೆಸಲಿಕ್ಕೆ ಪ್ರಯತ್ನ ಮಾಡಿಲ್ಲ ಹೇಗೆ ನೇಮಿಸಲಿಕ್ಕೆ ಆಗುತ್ತದೆ. ನವೆಂಬರ್, ಡಿಸೆಂಬರ್‌ನಲ್ಲಿ ಅಡ್ವರ್‌ಟೈಸ್ ಮಾಡಿ ಅಪ್ಲಿಕೇಷನ್ ಕರೆಯಬೇಕು ಅನಂತರ ಪ್ರೋಸೆಸ್ ಮಾಡಬೇಕು, ಇಂಟರ್‌ವ್ಯೂ ಮಾಡಬೇಕು ಸೆಲೆಕ್ಷನ್ ಮಾಡಬೇಕು ಅನಂತರ ಆರ್ಡರ್ ಕೊಡಬೇಕು. ನವೆಂಬರ್, ಡಿಸೆಂಬರ್‌ನಲ್ಲಿ ನಾವು ಕ್ರಮ ತೆಗೆದುಕೊಂಡು ಇಷ್ಟೆಲ್ಲಾ ಮಾಡಿ ಏಪ್ರಿಲ್‌ನಲ್ಲಿ ಎಕ್ಸಾಮಿನೇಷನ್ ಕಂಡಕ್ಟ್ ಮಾಡಿಸಬೇಕು ಎಂದು ಹೇಳಿದರೆ ಹೇಗೆ ಸಾಧ್ಯ ?